ಇಂದು ದಿನಾಂಕಃ.20.04.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ. ಕೆ ಬಿ ಬಿ ವಕೀಲರಿಂದಃ

ನನ್ನ ತಂದೆಯ ಹೆಸರು ಫಕ್ಕೀರಪ್ಪ ತಳವಾರ. ಮುಂದುವರೆದು ಒಲೆಕಾರ ಅಂತಾ ಕರೆಯುತ್ತಿದ್ದರು. ನನ್ನ ತಂದೆ ಸುಮಾರು 3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ನಾವು 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಈ ಹಿಂದೆ ಸದರಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ಮಾಡಿದ್ದು, ಆದರೆ ಕೇಸ್ ನಂಬರ ನನಗೆ ಗೊತ್ತಿಲ್ಲ. ಹಿಂದಿನ ದಾವೆ ಇನ್ನೂ ನಿಕಾಲಿ ಆಗಿಲ್ಲ. ಸದರಿ ದಾವೆಯನ್ನು ನಾವು ನನ್ನ ತಂದೆಯ ವಿರುದ್ದ ಆಸ್ತಿಗಾಗಿ ಹೂಡಿರುತ್ತೇವೆ. ಈ ಹಿಂದಿನ ದಾವೆ ನಂಃ132/2012 ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆ ದಾವೆ ದಿನಾಂಕಃ 10.08.2015 ರಂದು ಡಿಕ್ರಿಯಾಯಿತು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಮ್ಮ ಎಲ್ಲರಿಗೂ 1/7 ಹಿಸ್ಸೆ ಯಾಗಿತ್ತು ಎಂದರೆ ಸರಿ. ನನ್ನ ತಂದೆಯು 4 ನೇ ಪ್ರತಿವಾದಿಯ ಹತ್ತಿರ ಇದ್ದರು ನನ್ನ ಹತ್ತಿರ ಇರಲಿಲ್ಲ. ಹಿಂದಿನ ದಾವೆಯ ಕಾಲದಲ್ಲಿ ನನ್ನ ತಂದೆ 4 ನೇ ಪ್ರತಿವಾದಿಯವರ ಹತ್ತಿರ ಇದ್ದರು. ನನ್ನ ತಂದೆ ಪೋತಿಯಾಗುವವರೆಗೆ ಪ್ರತಿವಾದಿ 4 ರವರ ಹತ್ತಿರ ಇದ್ದರು. ನನ್ನ ತಂದೆಯು ಸೇರಿ ನಮಗೆಲ್ಲಾ 1/7 ಹಿಸ್ಸೆಯಾಗಿತ್ತು ಎಂದರೆ ಸರಿ. ಸದರಿ ಪ್ರಾಥಮಿಕ ಡಿಕ್ರಿಯ ಮೇಲೆ ಎಫ್ ಡಿ ಪಿ ಮಾಡಿದ್ದೇವು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ವಾದಿಯ ಹೆಸರಿಗೆ ಮೃತ್ಯು ಪತ್ರ ಮಾಡಿರುವ ಬಗ್ಗೆ ನನಗೆ ಮಾಹಿತಿ ಇದೆ . ಸದರಿ ಮಾಹಿತಿ ನನಗೆ ನಮ್ಮ ತಂದೆಯು ಪೋತಿಯ ನಂತರ ಗೊತ್ತಾಯಿತು. ಸದರಿ ಮೃತ್ಯು ಪತ್ರವನ್ನು ನಾನು ಓದಿಲ್ಲ. ನಾನು 23 ನೇ ವಯಸ್ಸಿನಿಂದ ಹೊನ್ನಾಳಿಯ ಮುಂದಿನ ತರಗನಹಳ್ಳಿಯಲ್ಲಿ ವಾಸವಿರುತ್ತೇನೆ. ನಾನು ನನ್ನ ತಂದೆ ತಾಯಿಯರ ಯೋಗಕ್ಷೇಮ ನೋಡಿಕೊಂಡಿಲ್ಲ ಎಂದರೆ ಸರಿ. ಈ ಹಿಂದಿನ ದಾವೆಯನ್ನು ನಾನು ಮತ್ತು ಪ್ರತಿವಾದಿ 2 ರವರು ಸೇರಿ ಹೂಡಿದ್ದೇವು. ಪ್ರತಿವಾದಿ 2 ರವರನ್ನು ತರಕಗನಹಳ್ಳಿಗೆ ಕೊಟ್ಟಿರುತ್ತೇವೆ. ಪ್ರತಿವಾದಿ 2 ರವರನ್ನು ನನ್ನ ಹೆಂಡತಿಯ ಅಣ್ಣನಿಗೆ ಕೊಟ್ಟಿರುತ್ತಾರೆ. ಪ್ರತಿವಾದಿ 6 ರವರನ್ನು ಚೌಡನಾಯನಕೊಪ್ಪಕ್ಕೆ ಕೊಟ್ಟಿರುತ್ತಾರೆ. ಎಪ್ ಡಿ ಪಿ ಯಲ್ಲಿ ಫೈನಲ್ ಡಿಕ್ರಿಯಾಗುವ ಮೊದಲೆ ನನ್ನ ತಂದೆ ಪೋತಿಯಾಗಿದ್ದರು ಎಂದರೆ ಸರಿ. ನನ್ನ ತಂದೆ ತಮಗೆ ಬಂದ ಹಿಸ್ಸೆಯು ತನ್ನ ಮೊಮ್ಮಗನಿಗೆ ಸೇರಿಲಿ ಎಂಬ ಉದ್ದೇಶದಿಂದ ದಿನಾಂಕಃ28.01.2018 ರಂದು ಮೃತ್ಯು ಪತ್ರ ಮಾಡಿದ್ದರು ಎಂದರೆ ಸುಳ್ಳು.

ಸದರಿ ಮೃತ್ಯುಪತ್ರ ಮಾಡುವ ಹಿಂದಿನ ದಿನ ಅಂದರೆ ದಿನಾಂಕಃ27.01.2018 ರಂದು ನನ್ನ ತಂದೆ ಸಾಕ್ಷಿದಾರರಾದ ನಾಗರಾಜ ಬೆಳಕೆರಪ್ಪ ಬಣಕಾರ, ಅರ್ಜುನಪ್ಪ ಮದ್ನೇರ್, ನಾಗರಾಜ ಬ್ಯಾಡಗಿ ಹಾಗೂ ನನ್ನ ತಾಯಿ ಸಿದ್ಲಿಂಗಮ್ಮ ಇವರ ಸಮಕ್ಷಮ ಎಂ ಬಿ ಜೊಕನಾಳ ವಕೀಲರೊಂದಿಗೆ ಚರ್ಚಿಸಿ ಮೃತ್ಯು ಪತ್ರ ಬರೆಯಿಸಿದ್ದರು ಎಂದರೆ ಸುಳ್ಳು ಮುಂದುವೆರದು ಸಾಕ್ಷಿಯು ನನ್ನ ತಂದೆ ತೀರಿಕೊಂಡಾಗಲೆ ಹೆಬ್ಬಟ್ಟು ಒತ್ತಿಸಿಕೊಂಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಬ್ಬಟ್ಟು ಒತ್ತಿಸುಕೊಳ್ಳುವಾಗ ನಾನು ಇರಲಿಲ್ಲ ಆದರೆ ಸ್ನಾನ ಮಾಡಿಸುವಾಗ ಹೆಬ್ಬಟ್ಟಿನಲ್ಲಿ ಶಾಯಿಯ ಗುರುತಿತ್ತು. ಸದರಿ ವಿಷಯವನ್ನು ನಾನು ಯಾರಿಗೂ ಹೇಳಿಲ್ಲ ಮತ್ತು ಯಾವುದೇ ದೂರು ನೀಡಿಲ್ಲ. ಆಗ ದೂರು ನೀಡಲು ನನಗೆ ಹುಷಾರಿರಲಿಲ್ಲ. ನನಗೆ ಹುಷಾರಿಲ್ಲದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಈ ಮೇಲೆ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಷಯದ ಬಗ್ಗೆ ನಾನು ಪಂಚಾಯಿತಿ ಸೇರಿಸಿಲ್ಲ ಎಂದರೆ ಸರಿ ಮುಂದುವರೆದು ಮೃತ್ಯು ಪತ್ರಕ್ಕೆ ಸಾಕ್ಷಿದಾರರಾದ ನಾಗರಾಜ ರವರು ಕೇಳಿದಾಗ ನಾನು ವಕೀಲರು ಹೇಳಿದ್ದರಿಂದ ಸಹಿ ಮಾಡಿರುವುದಾಗಿ ತಿಳಿಸಿರುತ್ತೇನೆ. ನಾನು ಸಹಿ ಮಾಡಿರುವ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ. ಸದರಿ ದಾವಾ ಆಸ್ತಿಗೆ ಸಂಬಂಧಟ್ಟಂತೆ ಇನ್ನೊಂದು ದಾವೆ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.ದಾವಾ ಆಸ್ತಿಯ ವಹಿವಾಟನ್ನು ನನ್ನ ತಾಯಿ ಹಾಗೂ ಅಣ್ಣಂದಿರು ಮಾಡುತ್ತಾರೆ.

( ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.